# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 258/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಪವಿತ್ ರಾಜು | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಶ್ರೀಕಂಠೇಗೌಡ | | **05.06.2025** |
| **ವಯಸ್ಸು** | ಃ 31 ವರ್ಷ | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** | ಃ 22 |
| **ವಾಸಸ್ಥಳ** | ಃ ಕೆರೆತೊಣ್ಣೂರು ಗ್ರಾಮ | **ಚಾ.ಸಾ.** | ಃ 12 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಕೆರೆತೊಣ್ಣೂರು ಗ್ರಾಮದ ಅಂಗನವಾಡಿ ಶಾಲೆಯಲ್ಲಿ ಮಮತಾ ಎನ್ನುವವರು ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಅವರು ನಮ್ಮ ಊರಿನವರೇ ಇದುದ್ದರಿಂದ ಅವರ ಪರಿಚಯ ನನಗೆ ಇತ್ತು. ಮಮತಾ ಈಗ ಜೀವಂತ ಇಲ್ಲ ಅವರು ಜೀವಂತ ಇದ್ದಾಗ ನ್ಯಾಯಾಲಯದ ಹಾಜರು ಇರುವ ಆರೋಪಿತನು ದುಡ್ಡು ಕಾಸಿನ ವಿಚಾರದಲ್ಲಿ ತೊಂದರೆ ಕೊಡುತ್ತಿರುತ್ತಾನೆ ಎಂದು ನನಗೆ ತಿಳಿಸಿದ್ದರು. ಆದರೆ ಯಾವ ರೀತಿ ತೊಂದರೆ ಕೊಡುತ್ತಿದ್ದ ಎನ್ನುವ ಬಗ್ಗೆ ನನಗೆ ಹೇಳಿರಲಿಲ್ಲ. ನಾನು ಆರೋಪಿತನನ್ನು ಕರೆಸಿ ಪಾಂಡವಪುರದಲ್ಲಿ ನನಗೆ ಗೊತ್ತಿರುವವರ ಕಡೆಯಿಂದ ಮಾತನಾಡಿಸಿದ್ದೆ. ಪಾಂಡವಪುರದಲ್ಲಿ ಆರೋಪಿತನು ಮಮತಾಳ ತಂಟೆಗೆ ಹೋಗದಂತೆ ಮತ್ತು ಮಮತಾಳು ಆರೋಪಿತನ ತಂಟೆಗೆ ಹೋಗದ ರೀತಿಯಲ್ಲಿ ಮಾತನಾಡಿಸಿದ್ದೆ. ಪೋಲೀಸ್ ಠಾಣೆಯಲ್ಲಿಯೂ ಸಹ ಆರೋಪಿತನು ಮಮತಾಳಿಗೆ ತಾನು ತಂಟೆಗೆ ಬರುವುದಿಲ್ಲ ಎಂದು ಹೇಳಿ ಬರೆದುಕೊಟ್ಟಿದ್ದರು. ಆ ನಂತರ ನನಗೆ ಮಮತಾ ಮರಣಹೊಂದಿರುತ್ತಾಳೆ ಎಂದು

ಹೇಳಿ ಪೋಲೀಸ್ ಠಾಣೆಯಿಂದ ನನಗೆ ಪೋನ್ ಮಾಡಿದ್ದರು. ಪೊಲೀಸಿನವರು ಆರೋಪಿತನ ಪೋನ್ ನಿಂದಲೇ ನನಗೆ ಪೋನ್ ಮಾಡಿ ತಿಳಿಸಿದ್ದರು ಮತ್ತು ಮಮತಾ ಇವರ ಮನೆಯವರ ಕಡೆಯವರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದರು. ನಾನು ರಾಮಣ್ಣ ಮತ್ತು ನಮ್ಮ ಊರಿನ ಜನರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದೆ ಆ ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನಾನು ಮೈಸೂರಿನ ಆಸ್ಪತ್ರೆಗೆ ಹೋಗಿದ್ದೆ. ನಾನು ಮತ್ತು ರಾಮಣ್ಣ ಸಿದ್ದಲಿಂಗಪುರದಲ್ಲಿರುವ ಬೇಕರಿ ಹತ್ತಿರ ಹೋಗಿದ್ದೆವು ಮತ್ತು ಆ ಬೇಕರಿಯಲ್ಲಿ ಮಮತಾ ರವರಿಗೆ ಏನು ಆಯಿತು ಎಂದು ಕೇಳಿದ್ದೆವು. ಬೇಕರಿಯ ಹತ್ತಿರ ಇದ್ದಂತಹ ಜನ ಮಮತಾ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳಿದ್ದರು. ಬೇಕರಿಯಲ್ಲಿ ಇದ್ದಂತಹ ನ್ಯಾಯಾಲಯದ ಹಾಜರಿರುವ ಆರೋಪಿ ಮನು ಮಮತಾ ಇವರನ್ನು ಕೊಲೆ ಮಾಡಿರುತ್ತಾರೆ ಆದ್ದರಿಂದ ಮಮತಾ ಇವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳಿದ್ದರು. ದುಡ್ಡು ಕಾಸಿನ ವಿಚಾರಕ್ಕೆ ಆ ಘಟನೆ ಆಗಿತ್ತು ಎಂದು ನನಗೆ ಗೊತ್ತಾಗಿತ್ತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿರಲಿಲ್ಲ ಆದರೆ ನಾನು ಪೋಲೀಸ್ ಠಾಣೆಗೆ ಹೋಗಿದ್ದಾಗ ಬರೆದುಕೊಂಡಿದ್ದರು ಮತ್ತು ನನ್ನ ಸಹಿ ಪಡೆದುಕೊಂಡಿದ್ದರು. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಸಾಕ್ಷಿ ಬಾಂಡ್ ಅನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-*30* ಎಂದು ಸಾಕ್ಷಿದಾರರ ಸಹಿಯನ್ನು ನಿ.ಪಿ-*30(ಎ)* ಎಂದು ಗುರುತಿಸಲಾಯಿತು.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

***ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ:-***

*2.* ರಾಮೇಗೌಡ ಮತ್ತು ಆತನ ಹೆಂಡತಿ ನನಗೆ ಚೆನ್ನಾಗಿ ಗೊತ್ತು ಎಂದರೆ ಸರಿ. ಮಮತಾ ಜೀವಂತ ಇದ್ದಾಗ ಆರೋಪಿ ತನ್ನ ಜೊತೆ ಸಲುಗೆಯಿಂದ ಇದ್ದು ಆ ಸಲುಗೆಯಿಂದ ಸಿದ್ದಲಿಂಗಪುರದಲ್ಲಿ ಬೇಕರಿ ಮಾಡಲು ಸಾಲ ಪಡೆದುಕೊಂಡಿದ್ದ ಹಣ ಕೊಡುವಂತೆ ಕೇಳಿದರೆ ನನಗೂ ನಿನಗೂ ಸಂಬಂಧ ಇದೆ ಎಂದು ನಿಮ್ಮ ಊರಿನವರಿಗೆ ಹೇಳುತ್ತೇನೆ ಎಂದು ಹೇಳಿ ಹೆದರಿಸುತ್ತಾನೆ ಎಂದು ಹೇಳಿ ಮತ್ತು ನಮ್ಮ ಊರಿನವರಾದ ನಟರಾಜು ಎನ್ನುವವರಿಗೆ ಪೊಟೋಗಳನ್ನು ಕಳುಹಿಸಿ ತೊಂದರೆ ಕೊಡುತ್ತಿದ್ದಾನೆ ಎಂದು ಹೇಳಿ ಮತ್ತು ಕರೆಸಿ ಬುದ್ದಿ ಹೇಳಿ ಎಂದು ನನ್ನನ್ನು ಕೇಳಿಕೊಂಡಿದ್ದರು ಎಂದರೆ ಸರಿ. ನಾನು ಈ ಬಗ್ಗೆ ಮಮತಾಳ ಗಂಡ ರಾಮೇಗೌಡರಿಗೆ ಹೇಳಿ ಪಾಂಡವಪುರ ಪೋಲೀಸ್ ಠಾಣೆಗೆ ದೂರನ್ನು ಕೊಡಿಸಿದ್ದೆ ಎಂದರೆ ಸರಿ. ಆಗ ಮೋಹನ್ ಕುಮಾರ್ ನನ್ನ ಮೊಬೈಲ್ ನಂಬರ್ ಪಡೆದುಕೊಂಡಿದ್ದ ಎಂದರೆ ಸರಿ. ದಿ:*24.05.2023* ರಂದು ಸಂಜೆ *4.30* ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದಾಗ ಸಿದ್ದಲಿಂಗಪುರದಲ್ಲಿ ಬೇಕರಿ ನಡೆಸಿಕೊಂಡಿದ್ದ ಮೋಹನ್ ಕುಮಾರ್ ನು ತನ್ನ ಮೊಬೈಲ್ ನಿಂದ ನನ್ನ ಮೊಬೈಲ್ ಗೆ ಕರೆ ಮಾಡಿ ರಾಮೇಗೌಡರ ಹೆಂಡತಿ ಮಮತಾ ರವರಿಗೆ ಯಾರೋ ತಲೆಗೆ ಹೊಡೆದು ಕೊಲೆ ಮಾಡಿರುತ್ತಾರೆ ಎಂದು ಈ ವಿಚಾರವನ್ನು ರಾಮೇಗೌಡರಿಗೆ ತಿಳಿಸಿ ಎಂದು ಹೇಳಿದ್ದ ಎಂದರೆ ಸರಿ. ರಾಘವೇಂದ್ರ ಬೇಕರಿ ಮತ್ತು ಸ್ವಿಟ್ ಬೇಕರಿ ಬಳಿಗೆ ಬಂದು ಗ್ರಾಮಸ್ಥರನ್ನು ವಿಚಾರಣೆ ಮಾಡಿದಾಗ ಮದ್ಯಾಹ್ನ ಮಮತಾ ರವರು ಸಿದ್ದಲಿಂಗಪುರದ ಗ್ರಾಮದಲ್ಲಿರುವ ಬೇಕರಿ ಬಳಿಗೆ ಬಂದಿದ್ದು ಬೇಕರಿಯಲ್ಲಿದ್ದ ಮೋಹನ್ ಕುಮಾರನಿಗೆ ಕೊಟ್ಟಿದ್ದ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದ ವಿಚಾರವಾಗಿ ಮೋಹನ್ ಕುಮಾರ್ ನು ಮಮತಾಳೊಂದಿಗೆ ಜಗಳ ತೆಗೆದು, ಜಗಳ

ವಿಕೋಪಕ್ಕೆ ತಿರುಗಿ ಬೇಕರಿಯಲ್ಲಿದ್ದ ಕಬ್ಬಿಣದ ರಾಡಿನಿಂದ ಮೋಹನ್ ಕುಮಾರ್ ಮಮತಾಳಿಗೆ ಹೋಡೆದು ಕೊಲೆ ಮಾಡಿ ಮೋಹನ್ ಕುಮಾರ್ ತಪ್ಪಿಸಿಕೊಂಡು ಹೋಗಿದ್ದ ಎಂದರೆ ಸರಿ. ಅದೇ ವೇಳೆಯಲ್ಲಿ ಮೋಹನ್ ಕುಮಾರ್ ಮಮತಾಳೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದು ಅಲ್ಲದೇ ಮಮತಾ ರವರಿಂದ ಬೇಕರಿ ಮಾಡಲು ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು ತಾನು ಮಮತಾ ರವರಿಂದ ಪಡೆದುಕೊಂಡಿದ್ದ ಸಾಲದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಕಬ್ಬಿಣದ ರಾಡಿನಿಂದ ಹೊಡೆದು ಕೊಲೆ ಮಾಡಿರುವುದಾಗಿ ನನಗೆ ಗೊತ್ತಾಗಿತ್ತು ಎಂದರೆ ನಿಜ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಈ ಎಲ್ಲಾ ವಿಚಾರಗಳನ್ನು ಹೇಳಿದ್ದೆ ಎಂದರೆ ಸರಿ. ನಾನು ಸಹಿ ಮಾಡಿದ ದಾಖಲೆಯಲ್ಲಿ ಕೇಸಿನ ವಿಚಾರವನ್ನು ಹೇಳುತ್ತೇನೆ ಎಂದು ಹೇಳಿ ಅದಕ್ಕೆ ಒಪ್ಪಿ ಸಹಿ ಮಾಡಿದ್ದೆ ಎಂದರೆ ನಿಜ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ.ಎಸ್ ರವರಿಂದಃ-</u>

*3.* ಮೃತ ಮಮತಾ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುವುದನ್ನು ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಮಮತಾಳ ಗಂಡ ರಾಮೇಗೌಡ ವ್ಯವಸಾಯದ ಕೆಲಸ ಮಾಡಿಕೊಂಡಿರುತ್ತಾರೆ. ರಾಮೇಗೌಡ ವ್ಯವಸಾಯವನ್ನು ಹೊರತು ಪಡಿಸಿ ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲ. ಮೃತ ಮಮತಾ ಅಂಗನವಾಡಿಯಲ್ಲಿ ಶಿಕ್ಷಕಿಯಾಗಿಕೆಲಸ ಮಾಡುತಿತದ್ದರಿಂದ ತಿಂಗಳಿಗೆ *10–12* ಸಾವಿರ ಸಂಬಳ ಕೊಡುತ್ತಿದ್ದರು ಎಂದರೆ ಸರಿ. ರಾಮೇಗೌಡ ವ್ಯವಸಾಯವನ್ನು ಸರಿಯಾಗಿ ಮಾಡದೇ ಕುಟುಂಬಕ್ಕೆ ಸಾಲ ಮಾಡಿಕೊಂಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಮಮತಾಳ ಕುಟುಂಬದ ಬಗ್ಗೆ ಆಗಲೀ ಮತ್ತು ಮಮತಾಳಿಗೆ ಯಾರು ಯಾರು ಸ್ನೇಹಿತರಿರುತ್ತಾರೆ ಎನ್ನುವ ಬಗ್ಗೆ ಮಾಹಿತಿ ಇರುವುದಿಲ್ಲ. ಮಮತಾಳು ತನ್ನ

ವೈಯಕ್ತಿಕ ವಿಚಾರದ ಬಗ್ಗೆ ಆಗಲೀ ಮತ್ತು ಕುಟುಂಬದ ವಿಚಾರವಾಗಲೀ ನನ್ನೊಂದಿಗೆ ಮಾತನಾಡುತ್ತಿರಲಿಲ್ಲ ಎಂದರೆ ಸರಿ. ಮಮತಾಳು ಯಾರ ಯಾರ ಜೊತೆಯಲ್ಲಿ ವ್ಯವಹಾರ ಮಾಡಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಮಮತಾಳ ಕುಟುಂಬದವರ, ಅವರ ಸಂಬಂಧಿಕರ ಮತ್ತು ಆರೋಪಿತನ ಜಗಳದ ಬಗ್ಗೆ ಒಂದು ಬಾರಿ ಪಂಚಾಯಿತಿ ಮಾಡಿದ್ದೆ. ಪಂಚಾಯಿತಿಯನ್ನು ಪಾಂಡವಪುರದ ನನ್ನ ಸ್ನೇಹಿತನ ಮನೆಯಲ್ಲಿ ಮಾಡಿದ್ದೆನು. ಆ ಪಂಚಾಯಿತಿಯನ್ನು ಮಾಡಿ *2* ವರ್ಷ ಮೇಲ್ಪಟ್ಟು ಆಗಿರುತ್ತದೆ. ಪಂಚಾಯಿತಿಯಲ್ಲಿ ನಾನು, ರಾಮೇಗೌಡ, ಮಮತಾ, ಆರೋಪಿ ಮತ್ತು ನನ್ನ ಒಬ್ಬ ಸ್ನೇಹಿತ ಇದ್ದೆವು. ನಾನು ಪಾಂಡವಪುರದಲ್ಲಿ ಸ್ನೇಹಿತನ ಮನೆಯಲ್ಲಿ ಪಂಚಾಯಿತಿ ಮಾಡಿದ ಬಗ್ಗೆ ಮತ್ತು ಯಾರು ಯಾರು ಇದ್ದರು ಎನ್ನುವ ಬಗ್ಗೆ ಯಾರ ಮುಂದೆಯೂ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಆದರೆ ಪೋಲೀಸ್ ಠಾಣೆಯಲ್ಲಿ ಹೇಳಿದ್ದೆ. ಈ ಒಂದು ಪಂಚಾಯಿತಿಯನ್ನು ಹೊರತು ಪಡಿಸಿದರೇ ಬೇರೆ ಯಾವುದೇ ಪಂಚಾಯಿತಿಯನ್ನು ನಾನು ಮಾಡಿರುವುದಿಲ್ಲ. ಮದ್ಯಾಹ್ನ ಸುಮಾರು *2-3* ಗಂಟೆಗೆ ಪೊಲೀಸರು ಆರೋಪಿತನ ಪೋನ್ ನಿಂದ ನನಗೆ ಪೋನ್ ಮಾಡಿದ್ದರು. ಪೊಲೀಸನವರು ನನಗೆ ಪೋನ್ ಮಾಡಿ ನಿನಗೆ ಮಮತಾ ಗೊತ್ತಾ ಎಂದು ಕೇಳಿದ್ದರು ಅದಕ್ಕೆ ನಾನು ಗೊತ್ತು ಎಂದು ಹೇಳಿದ್ದೆ ಮಮತಾಳಿಗೆ ಸೀರಿಯಸ್ ಆಗಿರುತ್ತದೆ ಆಕೆಯ ಗಂಡ ಮತ್ತು ಮನೆಯವರನ್ನು ಕೂಡಲೇ ಕರೆದುಕೊಂಡು ಬರುವಂತೆ ತಿಳಿಸಿದ್ದರು.

*4.* ಪೋಲೀಸ್ ಠಾಣೆಗೆ ಹೋದಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಪೋಲೀಸ್ ಠಾಣೆಗೆ ಹೋದಾಗ ನನ್ನ ಜೊತೆಯಲ್ಲಿ ಬಂದಿದ್ದವರನ್ನು ಬಿಟ್ಟರೇ ಪೋಲೀಸ್ ಠಾಣೆಯಲ್ಲಿ ಮತ್ತೆ ಯಾರು ಇದ್ದರು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಪೋಲೀಸ್ ಠಾಣೆಗೆ ಹೋದಾಗ ರಾಮೇಗೌಡ ಮತ್ತು ನಮ್ಮ ಊರಿನ *15–20* ಜನ ಇದ್ದೆವು. ಪೋಲೀಸ್ ಠಾಣೆಯಲ್ಲಿ ಪೊಲೀಸನವರು ಮಮತಾಳಿಗೆ ಆರೋಪಿತನು ಹೊಡೆದಿರುತ್ತಾನೆ ಮಮತಾಳು ಆಸ್ಪತ್ರೆಯಲ್ಲಿ ಇರುತ್ತಾಳೆ ಎಂದು ಹೇಳಿದ್ದರು. ಪೋಲೀಸ್ ಠಾಣೆಯಿಂದ ಸೀದಾ ಆಸ್ಪತ್ರೆಗೆ ಹೋಗಿದ್ದೆವು. ಆಸ್ಪತ್ರೆಗೆ ಹೋದಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾವು ಆಸ್ಪತ್ರೆಗೆ ಹೋದಾಗ ಮದ್ಯಾಹ್ನದ ಮೇಲೆ ಆಗಿತ್ತು. ಆಸ್ಪತ್ರೆಗೆ ಹೋದಾಗ ಶವದ ಹತ್ತಿರ ಯಾರು ಇರಲಿಲ್ಲ ನಾವು ಹೋಗಿ ಶವವನ್ನು ನೋಡಿದ್ದೆವು. ನಂತರ ಅಲ್ಲಿಂದ ನೇರವಾಗಿ ಊರಿಗೆ ಹೋಗಿದ್ದೆ. ಪೋಲೀಸ್ ಠಾಣೆಯಿಂದ ನೇರವಾಗಿ ಆಸ್ಪತ್ರೆಗೆ ಹೋಗಿ ಆ ನಂತರ ನಮ್ಮ ಊರಿಗೆ ಹೋಗಿದ್ದೆ ಮತ್ತೆ ಎಲ್ಲಿಗೂ ಹೋಗಿರಲಿಲ್ಲ. ಪೊಲೀಸನವರು ಸಾಕ್ಷಿ ಹೇಳಬೇಕು ಎನ್ನುವ ವಿಚಾರವಾಗಿ ನನ್ನ ಸಹಿ ಪಡೆದಿದ್ದರು. ಪೋಲೀಸಿನವರು ಬರೆಸಿಕೊಂಡಿದ್ದರು ಎನ್ನುವ ವಿಚಾರವಾಗಿ ನನಗೆ ಯಾವುದೇ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಕೇಳಿಯೇ ಬರೆದುಕೊಂಡಿದ್ದರು. ರಾಮೇಗೌಡರು ನನ್ನ ಸ್ನೇಹಿತರಿರುವುದರಿಂದ ಮತ್ತು ನಮ್ಮ ಊರಿನವರಿರುವುದರಿಂದ ಅವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:-** ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*